
■ ಹನಿ

## ವಿಕ್ಟೋರಿಯಾಳ ವಿಕ್ಟರಿ



ನೋಡಲು ತೆಳ್ಳಗೆ ಎತ್ತರಕ್ಕಿರುವ ಈಕೆಯ ಗಂಟಲ ಧ್ವನಿ ಕೇಳಿದರೆ ಟೆನಿಸ್ ಅಂಪೈರ್‌ಗಳೂ ನಡುಗುತ್ತಾರೆ. ಎರಡು ವಾರಗಳ ಹಿಂದೆ ಆಸ್ಟ್ರೇಲಿಯನ್ ಓಪನ್ ಟೆನಿಸ್ ಫೈನಲ್‌ನಲ್ಲಿ ಸರ್ವ್ ಮಾಡುವಾಗ ಈಕೆ ಹಾಕಿದ ಕೂಗು 95 ಡೆಸಿಬಲ್‌ನಷ್ಟಿತ್ತಂತೆ! (ನಮ್ಮ ಅಮಿತಾಭ್ ಬಚ್ಚನ್ ಮಾತನಾಡಿದರೆ ಧ್ವನಿ 94 ಡೆಸಿಬಲ್ ಇರುತ್ತೆ, ಅಷ್ಟೆ!) ಪ್ರತಿ ಸಲ ಸರ್ವ್ ಮಾಡುವಾಗಲೂ ದೀರ್ಘವಾಗಿ ಕೂಗು ಹಾಕುವುದು ಈಕೆಯ ಚಟ. ಸರ್ವ್ ಮಾಡಿದ ಚೆಂಡು ವಾಪಸ್ ಬಂದು ತಲುಪಿದರೂ ಈಕೆಯ ಕೂಗು ಮುಗಿದಿರುವುದಿಲ್ಲ! ಸರಾಸರಿ ಒಂದೂವರೆ ಸೆಕೆಂಡ್‌ಗಳಷ್ಟು ಕಾಲ ಈಕೆಯ ಕೂಗು ಇರುತ್ತದೆ; ಇದರಿಂದ ಆಕೆಯ ಆಟಕ್ಕೇ ತೊಂದರೆ ಎನ್ನುವುದು ಅಂಪೈರ್‌ಗಳ ಆಕ್ಷೇಪ. ಈಕೆ ವಿಕ್ಟೋರಿಯಾ ಅಜರೆಂಕ.

ಯಾರ ಆಕ್ಷೇಪ ಏನೇ ಇರಲಿ; ಈ ಸಲ ಆಸ್ಟ್ರೇಲಿಯನ್ ಓಪನ್ ಟೆನಿಸ್‌ನ ಫೈನಲ್‌ನಲ್ಲಿ ಈಕೆ ಮರಿಯಾ ಶೆರಪೋವಾಳನ್ನು ಸೋಲಿಸಿದ ವೇಗ ನೋಡಿ ಎಲ್ಲರೂ ದಂಗು ಬಡಿದದ್ದು ನಿಜ. ವಿಕ್ಟೋರಿಯಾ ಅಜರೆಂಕ ಈಗ ವಿಶ್ವದ ನಂಬರ್ ಒನ್! ಗ್ರ್ಯಾನ್‌ಸ್ಲಾಮ್ ಗೆದ್ದ ಬೆಲಾರಶ್ಯಾದ ಮೊದಲ ಆಟಗಾರ್ತಿ ಈಕೆ. ಈ ಹಿಂದೆ 2007ರಲ್ಲಿ ಯುಎಸ್ ಓಪನ್ ಮತ್ತು 2008ರಲ್ಲಿ ಫ್ರೆಂಚ್ ಓಪನ್ ಎರಡರಲ್ಲೂ ಮಿಕ್ಸೆಡ್ ಡಬಲ್ಸ್ ಗೆದ್ದಿದ್ದ ಈಕೆ ಸತತ ಐದು ವರ್ಷಗಳಿಂದ ನಂಬರ್ ಒನ್ ರ್‍ಯಾಂಕ್ ಮೇಲೆ ಕಣ್ಣಿಟ್ಟುಕೊಂಡೇ ಬೆಳೆದು ಬಂದವಳು. 2009ರಲ್ಲಿ ಒಮ್ಮೆ ಆಸ್ಟ್ರೇಲಿಯನ್ ಓಪನ್‌ನಲ್ಲಿ 2ನೇ ಸೀಡ್ ಸೆರೆನಾ ವಿಲಿಯಮ್ಸ್‌ಳನ್ನು ನೇರ ಸೆಟ್‌ಗಳಲ್ಲಿ ಚಚ್ಚಿ ದಾಖಲೆ ನಿರ್ಮಿಸಿದ್ದಳು.

16ರ ಹರೆಯದಲ್ಲೇ ಟೆನಿಸ್ ತರಬೇತಿ ಪಡೆಯತೊಡಗಿದ ವಿಕ್ಟೋರಿಯಾ 2007ರಲ್ಲಿ 96ನೇ ರ್‍ಯಾಂಕ್‌ನಲ್ಲಿದ್ದಳು. 2008ರಲ್ಲಿ 25ನೇ ರ್‍ಯಾಂಕ್‌ಗೆ ಜಿಗಿದಳು. ಈಗ 2012ರಲ್ಲಿ ಈಕೆ ವಿಶ್ವದ ನಂಬರ್ ಒನ್ ರ್‍ಯಾಂಕ್ ವಿಜೇತೆ. 4ವರ್ಷಗಳಲ್ಲಿ ಈಕೆಯ ಸಾಧನೆ ನಿಜಕ್ಕೂ ಅಮೋಘವಾದದ್ದು. ಒಂದು ಹಂತದಲ್ಲಿ ಟೆನಿಸ್ ಕೈಬಿಟ್ಟು ಕಾಲೇಜು ವ್ಯಾಸಂಗವನ್ನೇ ಮುಂದುವರಿಸಲು ಹೊರಟಿದ್ದ ಈಕೆಯನ್ನು ಈಕೆಯ ಅಜ್ಜಿ ಮರಳಿ ರ್‍ಯಾಕೆಟ್ ಹಿಡಿಯುವಂತೆ ಮಾಡಿದಳಂತೆ. ಅಜ್ಜಿಯ ಒತ್ತಡದಿಂದ ಮತ್ತೆ ಟೆನಿಸ್ ಶುರು ಮಾಡಿದ ವಿಕ್ಟೋರಿಯಾ ಈಗ ಏರಿರುವ ಎತ್ತರ ಅಸಾಧಾರಣ. ಈಕೆಯ ಆಟ ನೋಡಿದರೆ ಇನ್ನೂ 2–3 ವರ್ಷಗಳ ಕಾಲ ಈಕೆಯೇ ವಿಶ್ವ ಟೆನಿಸ್ ಸಾಮ್ರಾಜ್ಯವನ್ನು ಆಳುವಂತಿದೆ.

## ರಾಷ್ಟ್ರಾಧ್ಯಕ್ಷರ ವೆಲಂಟೈನ್!



ಕರ್ನಾಟಕದಲ್ಲಿ, ವಿಧಾನಸೌಧದಲ್ಲೇ 'ನೀಲಿಚಿತ್ರ' ನೋಡಿ ಸಿಕ್ಕುಬಿದ್ದು ಮೂವರು ಸಚಿವ ಸ್ಥಾನ ಕಳೆದುಕೊಂಡದ್ದನ್ನು ಜನ ಹಾದಿಬೀದಿಯಲ್ಲಿ ಮಾತನಾಡುತ್ತಿದ್ದಾರೆ. ಅದೇ ಫಿಲಿಪ್ಪೀನ್ಸ್‌ನಲ್ಲಿ ಅಲ್ಲಿಯ ರಾಷ್ಟ್ರಾಧ್ಯಕ್ಷ ಬೆನಿಗ್ನೊ ಅಕ್ವಿನೊ ತನ್ನ ನಾಲ್ಕನೆಯ ಗರ್ಲ್‌ಫ್ರೆಂಡ್‌ಗೆ ಕೈಕೊಟ್ಟು ಐದನೆಯವಳ ಜತೆ ಅಡ್ಡಾಡುವುದನ್ನು ಜನ ನೋಡಿಯೂ ನೋಡದಂತಿದ್ದಾರೆ! ರಾಷ್ಟ್ರಾಧ್ಯಕ್ಷ ಬೆನಿಗ್ನೊ ಅಕ್ವಿನೊ ಮೊದಲೇ ಅವಿವಾಹಿತ. ವಯಸ್ಸು 52 ದಾಟಿದರೂ ಇವರ ವೆಲಂಟೈನ್ಸ್ ಮೂಡ್ ಬಿಟ್ಟಿಲ್ಲ. ಈಗಿನ ಪ್ರೇಯಸಿ ಕಾಲಿಕಾಳ ವಯಸ್ಸು ಕೇವಲ ಮುವ್ವತ್ತು!

ಲಿಜ್ ಉಯ್ ಎಂಬ ಗೆಳತಿಯನ್ನು ಕೈಬಿಟ್ಟು ಇದೀಗ ಕಾಲಿಕಾ ಎಂಬ ಟೀಚರ್ ಜತೆಗೆ ರಾಷ್ಟ್ರಾಧ್ಯಕ್ಷರು ಸಂಬಂಧ ಬೆಳೆಸಿದ್ದಾರೆ ಎನ್ನುವುದು ಅಲ್ಲಿನ ಅಧಿಕೃತ ಸುದ್ದಿ.

ದೇಶದ ಮೊದಲ ಬ್ಯಾಚುಲರ್ ಅಧ್ಯಕ್ಷ ಎಂದೇ ಸುದ್ದಿ ಮಾಡಿ, 2010ರಲ್ಲಿ ಅಧ್ಯಕ್ಷ ಹುದ್ದೆಗೆ ಏರಿದ ಬೆನಿಗ್ನೊ ಅಕ್ವಿನೊ ಆರಂಭದಲ್ಲೇ ಶಲಾನಿ ಎನ್ನುವ ವೆನೆಜುವೆಲಾ ಕೌನ್ಸಿಲರ್ ಜತೆಗೆ ಗೆಳೆತನ ಬೆಳೆಸಿಕೊಂಡಿದ್ದರು. ಅದು ಮುರಿದು ಬಿದ್ದ ಬಳಿಕ ಕೂಲಿನ್ ಬಂದಳು. ಆಕೆಯೂ ಬಿಟ್ಟು ಹೋದ ಬಳಿಕ ಬೆಮಾಡೆಟ್ ಬಂದಳು. ಆ ಸಂಬಂಧವನ್ನೂ ಕೈಬಿಟ್ಟು ಲಿಜ್ ಜತೆ ಓಡಾಡತೊಡಗಿದರು. ಈಗ ಕಾಲಿಕಾ ಸರದಿ. ಅಧ್ಯಕ್ಷರು ಹೀಗೆ ಗರ್ಲ್‌ಫ್ರೆಂಡ್‌ಗಳನ್ನು ಸಾಲಾಗಿ ಕೈಬಿಟ್ಟರೂ ರಾಷ್ಟ್ರದ ಜನ ಇವರನ್ನು ಕೈಬಿಟ್ಟಿಲ್ಲ. 1998, 2001 ಮತ್ತು 2004ರಲ್ಲಿ ಸತತವಾಗಿ ಪ್ರತಿನಿಧಿ ಸಭೆಗೆ ಆಯ್ಕೆಯಾದ ಬೆನಿಗ್ನೊ ಅಕ್ವಿನೊ, ಆ ಬಳಿಕ ಸೆನೆಟ್‌ಗೆ ಆಯ್ಕೆಯಾಗಿ ಅಧ್ಯಕ್ಷ ಹುದ್ದೆಗೇರಿದರು. ದೇಶದ ಉದ್ಯಮಗಳ ಖಾಸಗೀಕರಣದಲ್ಲಿ ಮಹತ್ವದ ಪಾತ್ರ ವಹಿಸಿದ್ದಾರೆನ್ನುವುದು ಇವರ ಹೆಗ್ಗಳಿಕೆ. ಹಾಗೆ ನೋಡಿದರೆ ಈತನ ಕುಟುಂಬದಲ್ಲಿ ಈತ ನಾಲ್ಕನೇ ತಲೆಮಾರಿನ ರಾಜಕಾರಣಿ. ಈತನ ಅಜ್ಜ, ತಂದೆಯೂ ಉನ್ನತಾಧಿಕಾರ ಅನುಭವಿಸಿದವರೇ.

ಬ್ಯಾಚುಲರ್ ಲೈಫನ್ನು ಪೂರ್ಣವಾಗಿ ಎಂಜಾಯ್ ಮಾಡುತ್ತಿರುವ ಬೆನಿಗ್ನೊ ಒಂದು ಕಾಲದಲ್ಲಿ ಬಿಲಿಯರ್ಡ್ಸ್ ಆಟಗಾರ. ಆದರೆ ಈಗ ಮನೆಯಲ್ಲಿ ವೀಡಿಯೊ ಗೇಮ್ ಮಾತ್ರ ಆಡುತ್ತಾರಂತೆ! ಕುಡಿತಕ್ಕೆ ಈತ ತೀವ್ರ ವಿರೋಧಿ. ಕಳೆದ ಚುನಾವಣೆಯಲ್ಲಿ 'ನನ್ನನ್ನು ಗೆಲ್ಲಿಸಿದರೆ ಸಿಗರೇಟು ಸೇದುವುದನ್ನು ಬಿಟ್ಟುಬಿಡುತ್ತೇನೆ' ಎಂದಿದ್ದರು. ಆದರೆ ಇನ್ನೂ ಬಿಡಲು ಆಗಿಲ್ಲವಂತೆ! ■

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65